ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಶಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE:

# ಶಾಸಕರ ಕುಟುಂಬಸ್ಥರ ಚಿಕಿತ್ಸೆಗೆ ಬೊಕ್ಕಸದ

ಸಂ.ಕ. ಸಮಾಚಾರ ಬೆಂಗಳೂರು

ಕೊರೊನಾ ಸೋಂಕಿಗೆ ಒಳಗಾದ ಶಾಸಕರು ಅತ್ಯಾಧುನಿಕ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಂಡು ಚಿಕಿತ್ಸಾ ವೆಚ್ಚವನ್ನು ಪಾವತಿಸುವಂತೆ ಸರ್ಕಾರಕ್ಕೆ ಬಿಲ್ ನೀಡಿರುವುದು ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಮಾರ್ಚ್‌ನಿಂದ ಕೊರೊನಾ ಸೋಂಕು ಹರಡಿದ ನಂತರ ರಾಜ್ಯದ ಜನಪ್ರತಿನಿಧಿಗಳೂ ಕಂಗಾಲಾಗಿದ್ದು ಸೋಂಕು ತಗುಲಿದಾಗ ಅವರು ಹಾಗೂ ಅವರ ಕುಟುಂಬಸ್ಥರು ಆಸ್ಪತ್ರೆಗೆ ದ್ಯಾಖಲಾಗಿ ಚಿಕಿತ್ಸೆ ಪಡೆದುಕೊಂಡ ಹಿನ್ನೆಲೆಯಲ್ಲಿ 35.44 ಲಕ್ಷ ರೂ. ವೆಚ್ಚವಾಗಿದೆ. ಚಿಕಿತ್ಸೆ ಪಡೆದುಕೊಂಡ ಶಾಸಕರು ವೈದ್ಯಕೀಯ ವೆಚ್ಚದ ಮರುಪಾವತಿಗಾಗಿ ಬಿಲ್‌ಗಳನ್ನು ವಿಧಾನಸಭೆ ಸಚಿವಾಲಯಕ್ಕೆ ಸಲ್ಲಿಸಿರುವುದು ಚರ್ಚೆಗೆ ಗ್ರಾಸ ಒದಗಿಸಿದೆ.

ಈ ಕುರಿತು ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರು 'ಕೊರೊನಾ ಸೋಂಕಿಗೆ ಒಳಗಾದ ಶಾಸಕರು ಹೈಟೆಕ್ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಂಡು ಚಿಕಿತ್ಸಾ ವೆಚ್ಚ ಪಾವತಿಸುವಂತೆ ಸರ್ಕಾರಕ್ಕೆ ಬಿಲ್ ನೀಡಿರುವುದು ಎಷ್ಟರ ಮಟ್ಟಿಗೆ ಸರಿ. ಅದರಲ್ಲೂ ಶಾಸಕರು ಮಾತ್ರವಲ್ಲದೆ ಅವರ ಕುಟುಂಬದ ಚಿಕಿತ್ಸೆಗೂ ಸರ್ಕಾರವೇ ಭರಿಸಬೇಕೇ' ಎಂದು ಪ್ರಶ್ನೆ ಮಾಡಿದ್ದಾರೆ.




10 ಮಂದಿ ಜನಪ್ರತಿನಿಧಿಗಳಿಗೆ ಕೊರೊನಾ ಸೋಂಕು ತಗುಲಿದ್ದಕ್ಕೆ ಎಷ್ಟು ವೆಚ್ಚವಾಗಿದೆ ಎಂಬ ಬಗ್ಗೆ ಆರ್‌ಟಿಐ ಕಾರ್ಯಕರ್ತ ಎಚ್.ಎಂ. ವೆಂಕಟೇಶ್ ಎಂಬುವವರು ಮಾಹಿತಿ ಹಕ್ಕು ಕಾಯ್ದೆಯಡಿ ಪಡೆದ ಮಾಹಿತಿ ಪ್ರಕಾರ 10 ಮಂದಿ ಶಾಸಕರು ಹಾಗೂ ಅವರ ಕುಟುಂಬದವರ ಚಿಕಿತ್ಸಾ ವೆಚ್ಚ 35,44,281 ರೂ. ಆಗಿದೆ. ಶಾಸಕರಾದ ದುರ್ಯೋಧನ ಐಹೊಳೆ, ಟಿ.ಡಿ. ರಾಜೇಗೌಡ, ರಾಘವೇಂದ್ರ ಹಿಟ್ನಾಳ್, ಸುರೇಶ್ ಗೌಡ, ಸಿ.ಎಂ. ನಿಂಬಣ್ಣನವರ್, ನಾಗನಗೌಡ ಕಂದಕೂರ್, ಕೆ. ಪೂರ್ಣಿಮಾ ಶ್ರೀನಿವಾಸ್, ಬೆಳ್ಳಿ ಪ್ರಕಾಶ್, ಅನಿಲ್ ಬೆನಕೆ, ಬಿ.ಕೆ. ಸಂಗಮೇಶ್ವರ್ ಕೊರೊನಾ ಚಿಕಿತ್ಸಾ ವೆಚ್ಚದ ಮರುಪಾವತಿಗಾಗಿ ವಿಧಾನಸಭೆ ಸಚಿವಾಲಯದ ಮುಂದೆ ಅರ್ಜಿ ಸಲ್ಲಿಸಿದ್ದಾರೆ.

ಕೊರೊನಾ ಚಿಕಿತ್ಸೆ ಪಡೆದುಕೊಂಡ ಶಾಸಕರಲ್ಲಿ ಟಿ.ಡಿ. ರಾಜೇಗೌಡ, ಸಿ.ಎಂ. ನಿಂಬಣ್ಣನವರ್, ಕೆ. ಪೂರ್ಣಿಮಾ, ಬೆಳ್ಳಿಪ್ರಕಾಶ್ ಮಾತ್ರ ಸ್ವಂತಕ್ಕೆ ಮಾತ್ರ ಬಿಲ್ ವೆಚ್ಚಕ್ಕೆ ಅರ್ಜಿ ಸಲ್ಲಿಸಿದ್ದರೆ, ಉಳಿದವರು ತಾವೂ ಹಾಗೂ ತಮ್ಮ ಕುಟುಂಬದವರ ಚಿಕಿತ್ಸಾ ವೆಚ್ಚವನ್ನು ಪಾವತಿಸುವಂತೆ ಕೋರಿದ್ದಾರೆ.

**ಶಾಸಕರ ಚಿಕಿ**

ಐಹೊಳೆ ದುರ್ಯೋಧನ ಮತ್ತು

ಟಿ.ಡಿ. ರಾಜೇಗೌಡ

ಕೆ. ರಾಘವೇಂದ್ರ ಹಿಟ್ನಾಳ್ ಮತ್ತು

ಸುರೇಶ್‌ಗೌಡ ಪತ್ನಿಗೆ

ಸಿ.ಎಂ.ನಿಂಬಣ್ಣನವರ್

ನಾಗನಗೌಡ ಕಂದಕೂರು ಹಾಗೂ

ಕೆ. ಪೂರ್ಣಿಮಾ ಶ್ರೀನಿವಾಸ್

ಬೆಳ್ಳಿ ಪ್ರಕಾಶ್

ಅನಿಲ್ ಎಸ್ ಬೆನಕೆ, ಪತ್ನಿ, ಇಬ್ಬರು

ಬಿ.ಕೆ.ಸಂಗಮೇಶ್ವರ್ ಮತ್ತು ಪತ್ನಿಗೆ